**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ,**
**ದ.ಕ., ಮಂಗಳೂರು.**

| | |
|---|---|
| **ಎಸ್.ಸಿ.ನಂ.55/2016 ಮತ್ತು 161/2021, 80/2023** | |
| ಪ್ರಾ.ಸಾ.09 | ಚಾ.ಸಾ.13 |

| | |
|---|---|
| ಸಾಕ್ಷಿದಾರರ ಹೆಸರು | ಲೋಹಿತ್ ಶೆಟ್ಟಿ |
| ತಂದೆಯ ಹೆಸರು | ಜಗನ್ನಾಥ ಶೆಟ್ಟಿ |
| ಪ್ರಾಯ | 44 ವರ್ಷ |
| ಉದ್ಯೋಗ | ಕೃಷಿ |
| ವಾಸಸ್ಥಳ | ಪೂಪಾಡಿಕಟ್ಟೆ, ನಾವೂರು ಅಂಚೆ, ಬಂಟ್ವಾಳ ತಾಲೂಕು, ಮಂಗಳೂರು |
| ದಿನಾಂಕ | **21.02.2024** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು. |

**ಮುಖ್ಯವಿಚಾರಣೆ: ಸರಕಾರಿ ಅಭಿಯೋಜಕರಿಂದ.**

ಮೃತ ಗಣೇಶ ಶಿವರಾಮ ಶೆಟ್ಟಿ ನನ್ನ ಸಂಬಂಧಿಕ. ದಿನಾಂಕ 02.11.2015 ರಂದು ನನ್ನ ಮಾವ ಚಾಸಾ-10/ಅಶೋಕ್ ಶೆಟ್ಟಿ ರವರು ನಮ್ಮ ಸಂಬಂದಿಕ ಗಣೇಶ ಶಿವರಾಮ ಶೆಟ್ಟಿಯ ಮೇಲೆ ಹಲ್ಲೆಯಾಗಿದ್ದು, ನೀನು ಎ.ಜೆ ಆಸ್ಪತ್ರೆಯ ಬಳಿ ಬರುವಂತೆ ತಿಳಿಸಿದರು. ನಾನು ಮದ್ಯಾಹ್ನ 03.00 ರಿಂದ 03.30 ರ ವೇಳೆಗೆ ಎ.ಜೆ ಆಸ್ಪತ್ರೆಯ ಬಳಿ ಹೋಗಿರುತ್ತೇನೆ. ನಾನು ಎ.ಜೆ ಆಸ್ಪತ್ರೆಯ ಶವಾಗಾರಕ್ಕೆ ಗಣೇಶ ಶಿವರಾಮ ಶೆಟ್ಟಿಯವರ ಶವವನ್ನು ನೋಡಿರುತ್ತೇನೆ. ಅವರ ತಲೆ, ಗಲ್ಲ, ಕೈ, ಹೃದಯದ ಬಳಿ, ಬೆನ್ನಿಗೆ ಹರಿತವಾದ ಆಯುಧಗಳಿಂದ ಹೊಡೆದ ಗಾಯಗಳು ಆಗಿದ್ದವು.

2. ಕಾರಾಗೃಹದಲ್ಲಿ ಹಲ್ಲೆಯಾಗಿ ಅವರು ಮರಣ ಹೊಂದಿದ್ದಾರೆ ಎಂದು ನನಗೆ ಚಾಸಾ-10 ರವರಿಂದ ಗೊತ್ತಾಯಿತು. ಶವಾಗಾರದಲ್ಲಿ ನ್ಯಾಯಾಧೀಶರು, ಪೊಲೀಸರು ಹಾಗೂ ಇತರರು ಇದ್ದರು. ಶವ ಪಂಚನಾಮೆಯನ್ನು ಮದ್ಯಾಹ್ನ 03.30 ರಿಂದ ಸಂಜೆ 05.30 ರವರೆಗೆ ನಡೆಸಿರುತ್ತಾರೆ. ನಾನು ಶವಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ ಶವಪಂಚನಾಮೆಯನ್ನು ಈಗಾಗಲೇ ನಿಪಿ-12 ಎಂದು ಗುರುತಿಸಿದ್ದು, ಸಾಕ್ಷಿಯ

ಸಹಿಯನ್ನು ನಿಪಿ-12(ಬಿ) ಎಂದು ಗುರುತಿಸಲಾಯಿತು. ಶವ ಪಂಚನಾಮಾ ಕಾಲದಲ್ಲಿ ವಿಡಿಯೋ ಮಾಡಲಾಗಿರುತ್ತದೆ. ಸಾಕ್ಷಿ ನೋಡಿ ಗುರುತಿಸಿದ ಮೃತ ಗಣೇಶ ಶಿವರಾಮ ಶೆಟ್ಟಿಯವರ ಮೃತದೇಹದ 6 ಫೋಟೋಗಳನ್ನು ನಿಪಿ-8 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ.

**ಪಾಟೀಸವಾಲುಃ ಎಲ್ಲ ಆರೋಪಿತರ ಪರ ವಕೀಲರಿಂದ.**

ಪಾಟೀಸವಾಲು ಇಲ್ಲ ಎಂದು ನುಡಿದಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿಸಿ ಕೇಳಿ ತಿಳಿದುಕೊಂಡು ಸರಿ ಇದೆ ಎಂದು ಒಪ್ಪಿರುತ್ತಾರೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದ.ಕ., ಮಂಗಳೂರು.